# ಕರ್ನಾಟಕ ಜಾನಪದ ಪರಿಷತ್ತು

ಜಾನಪದ ಲೋಕ

ಸಂಸ್ಥಾಪಕರು : ನಾಡೋಜ ಎಚ್. ಎಲ್. ನಾಗೇಗೌಡ



ಅಧ್ಯಕ್ಷರು : ಶ್ರೀ ಟಿ. ತಿಮ್ಮೇಗೌಡ, ಐ.ಎ.ಎಸ್ (ನಿ)

ಮ್ಯಾನೇಜಿಂಗ್ ಟ್ರಸ್ಟಿ : ಶ್ರೀ ಆದಿತ್ಯ ನಂಜರಾಜ್

ಗೌರವ ಕಾರ್ಯದರ್ಶಿ : ಡಾ. ಹೆಚ್.ಆರ್. ರಾಜೇಗೌಡ


ದಿನಾಂಕ:

ಸನ್ಮಾನ್ಯರೆ,

## ಮನವಿ

**ವಿಷಯ: ಜಾನಪದ ಕಲಾವಿದರಿಗೆ ಸಹಾಯಕ್ಕಾಗಿ (ಯೋಗಕ್ಷೇಮ) ದತ್ತಿನಿಧಿ ಸಂಗ್ರಹದ ಕುರಿತು**

ಕರ್ನಾಟಕ ಜಾನಪದ ಪರಿಷತ್ತು ಕಳೆದ 39 ವರ್ಷಗಳಿಂದ ನಮ್ಮ ನಾಡಿನ ಜಾನಪದ ಕಲೆ, ಸಾಹಿತ್ಯ, ಸಂಸ್ಕೃತಿ, ಜಾನಪದ ಗೀತ ಗಾಯನ, ಜಾನಪದ ಕ್ರೀಡೆ, ಜಾನಪದ ವಸ್ತು ಮತ್ತು ಪರಿಕರಗಳ ಸಂಗ್ರಹ, ಜಾನಪದ ಸಂಪ್ರದಾಯ ಮತ್ತು ಚಟುವಟಿಕೆಗಳನ್ನು ಸಂರಕ್ಷಿಸಿ ಮುನ್ನಡೆಸುವ ಮಹತ್ಕಾರ್ಯವನ್ನು ನಿರ್ವಹಿಸುತ್ತಿದೆ. ದಿವಂಗತ ಶ್ರೀ ನಾಡೋಜ ಎಚ್. ಎಲ್ ನಾಗೇಗೌಡರು ಸಂಸ್ಥಾಪಿಸಿ ಬೆಳೆದು ಬಂದಿರುವ ಈ ಸಂಸ್ಥೆಯು ರಾಜ್ಯವ್ಯಾಪಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುತ್ತದೆ.

ಬೆಂಗಳೂರು–ಮೈಸೂರು ಹೆದ್ದಾರಿ ರಾಮನಗರ ಜಿಲ್ಲೆಯಲ್ಲಿರುವ 'ಜಾನಪದ ಲೋಕ' ರಾಜ್ಯದಲ್ಲೇ ಒಂದು ಪ್ರತಿಷ್ಠಿತ ಸಾಂಸ್ಕೃತಿಕ ಕೇಂದ್ರವಾಗಿ ಬೆಳೆದು ಬಂದಿದೆ. ಈ ಲೋಕದಲ್ಲಿ ಸಂಗ್ರಹವಾಗಿರುವ ಅಪರೂಪದ ಅಮೂಲ್ಯ ಜಾನಪದ ವಸ್ತು ಸಂಗ್ರಹಾಲಯವು ರಾಷ್ಟ್ರದಲ್ಲೇ ಪ್ರಖ್ಯಾತಿಯಾಗಿರುತ್ತದೆ. ಇದು ಜಾನಪದ ಕಲಾವಿದರ ತರಬೇತಿ, ಕಲಾ ಪ್ರದರ್ಶನ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಕೇಂದ್ರವೂ ಆಗಿರುತ್ತದೆ. ಇದನ್ನು ದಕ್ಷಿಣ ಭಾರತದ ಅತ್ಯುತ್ತಮ ಜಾನಪದ ಕೇಂದ್ರವನ್ನಾಗಿ ಅಭಿವೃದ್ಧಿಪಡಿಸಲು ಕರ್ನಾಟಕ ಜಾನಪದ ಪರಿಷತ್ತು ಅನೇಕ ಯೋಜನೆಗಳನ್ನು ರೂಪಿಸಿದೆ.

ನಮ್ಮ ಬಹುತೇಕ ಜಾನಪದ ಕಲಾವಿದರು ಆರ್ಥಿಕವಾಗಿ ಹಿಂದುಳಿದವರಾಗಿದ್ದು, ಅವರಿಗೆ ಅವರ ಕಲಾ ಪ್ರದರ್ಶನದಿಂದ ಬರುವ ಅತ್ಯಲ್ಪ ಹಣದಿಂದ ಜೀವನ ನಿರ್ವಹಣೆ ಕಷ್ಟವಾಗಿದೆ. ಈ ಕಲಾವಿದರು ಬಡತನ ಮತ್ತು ಅನಾರೋಗ್ಯದಿಂದ ಸಂಕಷ್ಟ ಅನುಭವಿಸುತ್ತಿದ್ದಾರೆ. ಸರ್ಕಾರವು ಸಹ ಇಂತಹ ಎಲ್ಲರಿಗೂ ಮಾಸಾಶನ ಕೊಡಲು ಸಾಧ್ಯವಾಗುತ್ತಿಲ್ಲ. ಆದುದರಿಂದ ನಾಡೋಜ ಎಚ್. ಎಲ್. ನಾಗೇಗೌಡರ ಆಶಯದಂತೆ ಜನಪದ ಕಲಾವಿದರ ಯೋಗಕ್ಷೇಮಕ್ಕಾಗಿ "ಕಲಾವಿದರ ಕ್ಷೇಮನಿಧಿ" ಯನ್ನು ಸ್ಥಾಪಿಸಿ ದತ್ತಿಯಿಂದ ಮತ್ತು ಸದಸ್ಯತ್ವದ ಮೂಲಕ ಬರುವ ಹಣವನ್ನು ಈ ನಿಧಿಗೆ ಸೇರಿಸಿ ಪ್ರತಿ ವರ್ಷ ಹಿರಿಯ ವಯಸ್ಸಾದ ಮತ್ತು ಅನಾರೋಗ್ಯ ಮುಂತಾದ ಕಾರಣಗಳಿಂದ ಸಂಕಷ್ಟಕ್ಕೊಳಗಾಗುವ ಜನಪದ ಕಲಾವಿದರಿಗೆ ಕರ್ನಾಟಕ ಜಾನಪದ ಪರಿಷತ್ತು ಧನಸಹಾಯ ಮಾಡುವ ಯೋಜನೆ ಹಮ್ಮಿಕೊಂಡಿದೆ. ಆದುದರಿಂದ, ತಾವು ಈ ನಿಧಿಗೆ ಚೆಕ್ / ಡಿ.ಡಿ ಮೂಲಕ "ಕರ್ನಾಟಕ ಜಾನಪದ ಪರಿಷತ್ತು" ಹೆಸರಿಗೆ ಉದಾರವಾಗಿ ಧನಸಹಾಯವನ್ನು ಮಾಡಬೇಕಾಗಿ ಕೋರುತ್ತೇನೆ.

(ಟಿ. ತಿಮ್ಮೇಗೌಡ ಐ.ಎ.ಎಸ್(ನಿ))
ಅಧ್ಯಕ್ಷರು


ಜಾನಪದ ಸಿರಿಭುವನ (ಕೇಂದ್ರ ಕಛೇರಿ)

ನಂ. 1, ಜಲದರ್ಶಿನಿ ಬಡಾವಣೆ, ಎಂ. ಎಸ್. ರಾಮಯ್ಯ ಆಸ್ಪತ್ರೆ ಮಹಾದ್ವಾರದ ಹತ್ತಿರ, ನ್ಯೂ ಬಿ.ಇ.ಎಲ್. ರಸ್ತೆ, ಬೆಂಗಳೂರು–560 054

ದೂರವಾಣಿ : 080–23605033, email : jaanapadaloka@gmail.com website : www.janapadaloka.in

ಜಾನಪದ ಲೋಕ (ರಾಮನಗರ ಜಿಲ್ಲೆ, ರಾಜ್ಯ ಹೆದ್ದಾರಿ) : 080–29782000